ಬೇಲೂರು ಪಟ್ಟಣದಲ್ಲಿ ಪೋಲೀಸ್ ವಸತಿಗೃಹ ನಿರ್ಮಾಣ.

2404 (2814) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ಪಟ್ಟಣದಲ್ಲಿ ಪೋಲೀಸ್ ವಸತಿಗೃಹ ನಿರ್ಮಾಣಮಾಡುತ್ತಿದ್ದು ಪ್ರಸ್ತುತ ಕಾಮಗಾರಿ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಇ) ಹಾಗಿಲ್ಲದಿದ್ದಲ್ಲಿ, ಈ ಕಾಮಗಾರಿ ವಿಳಂಬವಾಗಲು ಕಾರಣಗಳೇನು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಈ ಕಾಮಗಾರಿಯನ್ನು 06-07-2001ರಿಂದ ಗುತ್ತಿಗೆದಾರರು ಪುನರಾರಂಭಿಸಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

ಆ) ಗುತ್ತಿಗೆದಾರರು ಕಾಮಗಾರಿಯನ್ನು ಹಿಂದೆ ನಿಲ್ಲಿಸಿದ್ದು, ನೋಟೀಸನ್ನು ಜಾರಿ ಮಾಡಿದ ನಂತರ ಈಗ ಕಾಮಗಾರಿಯನ್ನು ಪುನರಾರಂಭಿಸುತ್ತಿದೆ.

ಕಾರಂಜಾ ನೀರಾವರಿ ಯೋಜನೆಯಲ್ಲಿ ಸಿಬ್ಬಂದಿ ಕೊರತೆ.

2405 (2205) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) :— ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾರಂಜ ನೀರಾವರಿ ಯೋಜನೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು (ಹುದ್ದೆಗಳ ಪದನಾಮವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ ಹಾಗೂ ಎಷ್ಟು ಹುದ್ದೆಗಳು ಖಾಲಿಯಾಗಿವೆ;

ಇ) ಖಾಲಿಯಾಗಿರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವುದಾಗಿ ಕಳೆದ ವಿಧಾನಸಭೆಯ ಅಧಿವೇಶನದ ಸಮಯದಲ್ಲಿ ಭರವಸೆ ನೀಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಇಲ್ಲಿಯವರೆವಿಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಳಂಭ ನೀತಿಯನ್ನು ಅನುಸರಿಸುತ್ತಿರಲು ಕಾರಣಗಳೇನು;

ಉ) ಈ ನೀರಾವರಿ ಯೋಜನೆಯಲ್ಲಿ ಹಲವಾರು ಮುಖ್ಯ ಹುದ್ದೆಗಳು ಖಾಲಿ ಇದ್ದು ಸಿಬ್ಬಂದಿಯ ಕೊರತೆಯಿರುವುದರಿಂದ ಈ ಯೋಜನೆಯನ್ನು ನಿಗದಿಪಡಿಸಿದ ಕಾಲಾವಧಿಯೊಳಗೆ ಮುಕ್ತಾಯಗೊಳಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಸರ್ಕಾರದ ಈ ನಿಟ್ಟಿನಲ್ಲಿ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) 315. ಅಂಕಿ ಅಂಶಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ - 259
ಖಾಲಿ ಹುದ್ದೆಗಳ ಸಂಖ್ಯೆ - 50

ಇ) ಹೌದು

ಈ) ನೀರಾವರಿ ಇಲಾಖೆಯಲ್ಲಿ 980 ಸಹಾಯಕ ಇಂಜಿನಿಯರ್‌ಗಳ ಹಾಗೂ 507 ಕಿರಿಯ ಇಂಜಿನಿಯರ್‌ಗಳ ಹುದ್ದೆಗಳು ಖಾಲಿ ಇವೆ. ಕಾರಣ 500 ಸಹಾಯಕ ಇಂಜಿನಿಯರ್‌ಗಳನ್ನು ಮತ್ತು 250 ಕಿರಿಯ ಇಂಜಿನಿಯರ್‌ಗಳನ್ನು ನೇಮಕ ಮಾಡುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ. ಆದರೂ ಕಡಿಮೆ ಕೆಲಸವಿರುವ ಬೇರೆ ವೃತ್ತ ವಿಭಾಗ, ಉಪ ವಿಭಾಗಗಳಿಂದ ವರ್ಗಾಯಿಸಿ ಸರ್ಕಾರದ ದಿನಾಂಕ: 12-7-2001ರ ಆದೇಶದಲ್ಲಿ 15 ಸಹಾಯಕ ಇಂಜಿನಿಯರ್ ಹಾಗೂ 4 ಕಿರಿಯ ಇಂಜಿನಿಯರ್‌ಗಳನ್ನು ಕಾರಂಜಾ ಯೋಜನೆಗೆ ನಿಯುಕ್ತಿಗೊಳಿಸಲಾಗಿದೆ.

ಉ) ಸಿಬ್ಬಂದಿ ಕೊರತೆಯಿಂದಾಗಿ ಯೋಜನಾ ಕೆಲಸವು ವಿಳಂಭವಾಗಿಲ್ಲ.

ಊ) ಈ ಹಿಂದೆ ಖಾಲಿ ಇದ್ದ 81 ಹುದ್ದೆಗಳ ಪೈಕಿ 25 ಹುದ್ದೆಗಳನ್ನು ತುಂಬಲಾಗಿದ್ದು, ಇನ್ನುಳಿದ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗಿದೆ. ಆದ್ದರಿಂದ ಕಾರಂಜಾ ಯೋಜನೆಯ ಪ್ರಗತಿಗೆ ಧಕ್ಕೆ ಆಗಲು ಅವಕಾಶ ನೀಡುವುದಿಲ್ಲ.

ಅನುಬಂಧ

ಕಾರಂಜಾ ಯೋಜನೆಯ ಕಛೇರಿಗಳಿಗೆ ಮಂಜೂರಾಗಿರುವ ಹುದ್ದೆಗಳು

ಕ್ರಮ ಸಂಖ್ಯೆ	ಹುದ್ದೆಯ ಹೆಸರು		ಮಂಜೂರಾದ ಹುದ್ದೆಗಳ ಸಂಖ್ಯೆ
1	2		3
1.	ಅಧೀಕ್ಷಕ ಇಂಜಿನಿಯರ್	-	1
2.	ಕಾರ್ಯಪಾಲಕ ಇಂಜಿನಿಯರ್	-	3
3.	ಸಹಾಯಕ ಕಾರ್ಯಪಾಲಕ ಇಂಜಿನಿಯರ್	-	13
4.	ಸಂಬಂಧಕರು	-	1
5.	ಸಹಾಯಕ ಇಂಜಿನೀಯರ್	-	61
6.	ಕಿರಿಯ ಇಂಜಿನಿಯರ್	-	29
7.	ಅಧೀಕ್ಷಕರು	-	5
8.	ಆಕೃತಿ ರಚನಾಕಾರರು	-	5
9.	ಅನುಲೇಖಕರು	-	4
10.	ಪ್ರಥಮ ದರ್ಜೆ ಸಹಾಯಕರು	-	21
11.	ದ್ವಿತೀಯ ದರ್ಜೆ ಸಹಾಯಕರು	-	36
12.	ಪ್ರಥಮ ದರ್ಜೆ ಭೂಮಾಪಕರು	-	2
13.	ದ್ವಿತೀಯ ದರ್ಜೆ ಭೂಮಾಪಕರು	-	2
14.	ಲೆಕ್ಕ ಅಧೀಕ್ಷಕರು	-	3
15.	ಪ್ರಥಮ ದರ್ಜೆ ಲೆಕ್ಕ ಸಹಾಯಕರು	-	7
16.	ದ್ವಿತೀಯ ದರ್ಜೆ ಲೆಕ್ಕ ಸಹಾಯಕರು	-	15
17.	ಪ್ರಥಮ ದರ್ಜೆ ಉಗ್ರಾಣ ಪಾಲಕರು	-	3
18.	ದ್ವಿತೀಯ ದರ್ಜೆ ಉಗ್ರಾಣ ಪಾಲಕರು	-	4
19.	ಶೀಘ್ರಲಿಪಿಕಾರರು	-	3
20.	ಬೆರಳಚ್ಚುಗಾರರು	-	23
21.	ನೀಲಿ ಮುದ್ರಕರು	-	2
22.	ವಾಹನ ಚಾಲಕರು	-	16
23.	ಆಟೆಂಡರ್	-	4
24.	ಜವಾನರು	-	37
25.	ಕಾವಲುಗಾರರು	-	14
26.	ಕಸ ಗುಡಿಸುವವರು	-	1
	ಒಟ್ಟು	-	315